# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 33/2022

| | | | |
|---|---|---|---|
| ಹೆಸರು | : | ಜಾಫರ್ ವಾಲೀಕಾರ | ಪ್ರಾ.ಸಾ-6 |
| ಗಂಡನ ಹೆಸರು | : | ಮಾಬೂಬಸಾಬ | ಚಾಸಾ-15 |
| ವಯಸ್ಸು | : | 18 ವರ್ಷ | |
| ಉದ್ಯೋಗ | : | ವಿದ್ಯಾರ್ಥಿ | |
| ವಿಳಾಸ | : | ಚಟ್ನಿಹಾಳ | |

ದಿಃ 15.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ಚಾಸಾ-14/ರಂಜಾನಸಾಬ ನನ್ನ ಅಣ್ಣ. ಮೃತ ಅಲ್ಲಾಸಾಬ ನನ್ನ ಮಾವ. ಮೃತ ಅಲ್ಲಿಸಾಬ ಹಿಟಾಚಿ ಚಾಲಕನಾಗಿ ಕುಕನೂರು ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದು, ಆಗಾಗ ಸಮಯ ಸಿಕ್ಕಾಗ ಊರಿಗೆ ಬಂದು ಹೋಗುತ್ತಿದ್ದನು. ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಅವರು ನಮ್ಮ ಊರಿನವರು.

2. ಈಗ ಸುಮಾರು 2 ವರ್ಷಗಳ ಹಿಂದೆ ನಾನು ಮತ್ತು ನನ್ನ ಅಣ್ಣ ಚಾಸಾ-14 ರವರು ರಾತ್ರಿ 10 ಗಂಟೆ ಸುಮಾರಿಗೆ ನಮ್ಮ ಊರಿನ ಕನಕದಾಸ ವೃತ್ತದ ಬಳಿ ನಿಂತಿದ್ದೆವು. ಆಗ ನನ್ನ ಮಾವ ಅಲ್ಲಿಸಾಬ ರವರು ಗ್ಯಾನಪ್ಪ ರವರ ಮನೆ ಕಡೆಗೆ ಹೋಗುವುದನ್ನು ನೋಡಿರುತ್ತೇವೆ. ಸುಮಾರು 15 ನಿಮಿಷಗಳ ನಂತರ 1 ನೇ ಆರೋಪಿ ಗ್ಯಾನಪ್ಪ ರವರ ಮನೆಯಿಂದ ಕೂಗಾಟದ ಶಬ್ಧ ಕೇಳಿ ಬಂದಿತು. ಕೂಡಲೆ ನಾನು ಮತ್ತು ಚಾಸಾ-14 ರವರು 1 ನೇ ಆರೋಪಿ ಗ್ಯಾನಪ್ಪ ರವರ ಮನೆ ಬಳಿ ಹೋದಾಗ, ರೇಣುಕಾ ಮತ್ತು ಆರೋಪಿತರಾದ ಚಂದ್ರಪ್ಪ, ಹನಮಪ್ಪ, ಗ್ಯಾನಪ್ಪ, ಯಲ್ಲಮ್ಮ, ಬಾಲಪ್ಪ, ಕರಿಯಪ್ಪ, ದ್ಯಾವಪ್ಪ, ಮತ್ತೊಬ್ಬ ಹನಮಪ್ಪ ರವರು ಇದ್ದರು, ಮತ್ತು ಆರೋಪಿತರು ಮನೆಯ ಒಳಗಡೆ ಇದ್ದ ಅಲ್ಲಿಸಾಬನಿಗೆ ಅವಾಚ್ಯ ಶಬ್ಧಗಳಿಂದ ಬೈಯುತ್ತಾ ಇಲ್ಲಿಗೆ ಏಕೆ ಬಂದಿದ್ದೀಯಾ ಎಂದು ಕೇಳುತ್ತಿದ್ದರು. ಆಗ

ಮನೆಯ ಬಾಗಿಲು ತೆರೆದಿತ್ತು. ಆಗ ನಾನು ಮತ್ತು ಚಾಸಾ-14 ಕೂಡಲೆ ನಮ್ಮ ಮಾವನ ಮನೆಗೆ ಹೋಗಿ ಆರೋಪಿತರು ಅಲ್ಲಿಸಾಬನಿಗೆ ಅವರ ಮನೆಯಲ್ಲಿ ಅವಾಚ್ಯ ಶಬ್ಧಗಳಿಂದ ಬೈಯುತ್ತಾ ಹೊಡೆಯುತ್ತಿದ್ದಾರೆ ಎಂದು ತಿಳಿಸಿರುತ್ತೇವೆ. ನಂತರ ನನ್ನ ಮಾವ ಮತ್ತು ನಮ್ಮ ಮನೆಯವರೆಲ್ಲರೂ ಸೇರಿ ಆರೋಪಿತರ ಮನೆ ಬಳಿ ಬಂದಾಗ ಮನೆ ಬಾಗಿಲು ಒಳಗಿನಿಂದ ಹಾಕಲಾಗಿತ್ತು, ನಾವು ಮನೆ ಬಾಗಿಲನ್ನು ತಟ್ಟಿದ್ದರೂ ಸಹ ಆರೋಪಿತರು ಬಾಗಿಲನ್ನು ತೆಗೆಯಲಿಲ್ಲ. ನಂತರ ಮನೆಯ ಪಶ್ಚಿಮ ದಿಕ್ಕಿಗೆ ಇದ್ದ ಕಿಟಕಿಯಿಂದ ನೋಡಿ, ಆರೋಪಿತರಿಗೆ ಇದೊಂದು ಸಲ ತಪ್ಪಾಗಿದೆ ಇನ್ನೊಂದು ಸಲ ಬರದ ಹಾಗೆ ನೋಡಿಕೊಳ್ಳುತ್ತೇವೆ ಎಂದು ಹೇಳಿರುತ್ತೇವೆ. ಆಗ ಆರೋಪಿತರು ನಮಗೆ ಏ ಬೋಸಡಿ ಮಕ್ಕಳಾ ನಿಮ್ಮ ಮನೆ ಹೆಣ್ಣು ಮಕ್ಕಳಿಗೆ ಈ ರೀತಿ ಮಾಡಿದರೆ ಸುಮ್ಮನೆ ಇರುತ್ತೀರಾ ಎಂದು ನಮಗೆ ಅವಾಚ್ಯವಾಗಿ ಬೈದಿರುತ್ತಾರೆ. ಆರೋಪಿತರಾದ ಹನಮಪ್ಪ ಮತ್ತು ಚಂದ್ರಪ್ಪ ರವರು ಬಡಿಗೆಯಿಂದ ಅಲ್ಲಾಸಾಬನ ಮೈಕೈಗೆ ಹೊಡೆದಿರುತ್ತಾರೆ, ಆಗ ಅಲ್ಲಿಸಾಬ ದನದ ಕೊಟ್ಟಗಿ ಒಳಗೆ ಬಿದ್ದಾಗ 1 ನೇ ಆರೋಪಿ/ಗ್ಯಾನಪ್ಪ ಸಲಾಕೆಯ ಕಾವಿನಿಂದ ಅಲಿಸಾಬನ ಮುಖಕ್ಕೆ ಮತ್ತು ತಲೆಗೆ ಹೊಡೆದಿರುತ್ತಾರೆ. ಉಳಿದ ಆರೋಪಿತರು ಅಲ್ಲಿಸಾಬನಿಗೆ ಕೈಯಿಂದ ಹೊಡೆದು, ಕಾಲಿನಿಂದ ಒದ್ದಿರುತ್ತಾರೆ.

3. ಅದೇ ಸಮಯಕ್ಕೆ 1 ನೇ ಆರೋಪಿ/ಗ್ಯಾನಪ್ಪ ತನ್ನ ಹೆಂಡತಿ ರೇಣುಕಾಗೆ ಒದ್ದಾಗ ಆಕೆಯ ತಲೆ ಗೋಡೆಗೆ ಬಡಿದು ಕೆಳಗೆ ಬಿದ್ದಿರುತ್ತಾಳೆ. 2 ನೇ ಆರೋಪಿ/ಚಂದ್ರಪ್ಪ ಮತ್ತು ಯಲ್ಲವ್ವ ಆಕೆಗೆ ಕೈಗಳಿಂದ ಹೊಡೆದಿರುತ್ತಾರೆ. ಆ ಸಮಯಕ್ಕೆ ಹೊಯ್ಸಳ ಪೊಲೀಸ ವ್ಯಾನ್ ಶಬ್ಧ ಬಂದಾಗ ಆರೋಪಿತರು ಈ ಸೂಳೆಮಗ ಸತ್ತಾ ಎಂದು ಹೇಳಿ ಅವರ ಮನೆಯಿಂದ ಎಲ್ಲರೂ ಓಡಿ ಹೋಗಿರುತ್ತಾರೆ.

4. ನಂತರ ನಾವೆಲ್ಲರೂ ಒಳಗೆ ಹೋಗಿ ನೋಡಿದಾಗ ನನ್ನ ಮಾವ ಅಲ್ಲಿಸಾಬ ದನದ ಕೊಟ್ಟಿಗೆಯಲ್ಲಿ ರಕ್ತಗಾಯಗಳಾಗಿ ಸತ್ತು ಬಿದ್ದಿದ್ದನು. ನಂತರ ನನ್ನ ಮಾವ ಚಾಸಾ-1 ರವರು ಮರುದಿನ ದೂರು ದಾಖಲಿಸಿರುತ್ತಾರ ಘಟನೆ ಕುರಿತು ಪೊಲೀಸರು ನನ್ನನ್ನು ವಿಚಾರಣೆ

ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ನನ್ನ ಮಾವ ಅಲಿಸಾಬನಿಗೆ ಹೊಡೆದ 1, 2, 3 ಮತ್ತು 6 ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ಉಳಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲುಃ**

**(ಆರೋಪಿತರ ಪರ ವಕೀಲರು ಅರ್ಜಿ ಸಲ್ಲಿಸಿ ಸಾಕ್ಷಿಯನ್ನು ಚಾಸಾ-6 ರಿಂದ 16 ರವರ ಮುಖ್ಯ ವಿಚಾರಣೆ ಆದ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿ** ಈಗಾಗಲೇ **ಅರ್ಜಿ ಸಲ್ಲಿಸಿದ್ದು, ಅದನ್ನು ಪುರಸ್ಕರಿಸಿ, ಪಾಟೀ ಸವಾಲನ್ನು ಮುಂದೂಡಲಾಯಿತು**)..

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 33/2022

| | | | |
|---|---|---|---|
| ಹೆಸರು | : | ಮುಮ್ತಾಜಬೇಗಂ ನಧಾಪ | ಫ್ರಾ.ಸಾ-5 |
| ಗಂಡನ ಹೆಸರು | : | ರಂಜಾನಸಾಬ | ಚಾಸಾ-13 |
| ವಯಸ್ಸು | : | 26 ವರ್ಷ | |
| ಉದ್ಯೋಗ | : | ಕೂಲಿ | |
| ವಿಳಾಸ | : | ಚಟ್ನಿಹಾಳ | |

ದಿಃ 15.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಅಲ್ಲಾಸಾಬ ನನ್ನ ಮೈದುನ. ಚಾಸಾ-1/ಮುರ್ತುಜಸಾಬ ನನ್ನ ಭಾವ. ಚಾಸಾ-7 ರಿಂದ 9 ರವರು ನನ್ನ ಮೈದುನರು. ಚಾಸಾ-10 ಮತ್ತು 11 ರವರು ನನ್ನ ಅತ್ತೆ ಮತ್ತು ಮಾವ. ಚಾಸಾ-14 ಮತ್ತು 15 ರವರು ನನ್ನ ನಾದಿನಿಯ ಮಕ್ಕಳು. ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಅವರು ನಮ್ಮ ಊರಿನವರು. ಚಾಸಾ-6/ರೇಣುಕಾ ಇವಳು 1 ನೇ ಆರೋಪಿ/ಗ್ಯಾನಪ್ಪನ ಹೆಂಡತಿ. ಮೃತ ಅಲ್ಲಿಸಾಬ ಹಿಟಾಚಿ ಚಾಲಕನಾಗಿ ಕುಕನೂರು ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದು, ಆಗಾಗ ಸಮಯ ಸಿಕ್ಕಾಗ ಊರಿಗೆ ಬಂದು ಹೋಗುತ್ತಿದ್ದನು.

2. ಊರಿನಲ್ಲಿ ಚಾಸಾ-6/ರೇಣುಕಾ ಮತ್ತು ಮೃತ ಅಲ್ಲಿಸಾಬ ರವರ ಮಧ್ಯ ಅನೈತಿಕ ಸಂಬಂಧ ಇರುತ್ತದೆ ಎಂದು ಸುದ್ದಿಯಾಗಿ ಜನರು ಮಾತನಾಡುತ್ತಿದ್ದರು. ಸದರಿ ವಿಚಾರ ತಿಳಿದು ನಾನು, ನನ್ನ ಅತ್ತೆ ಮಾವ ಮತ್ತು ನಮ್ಮ ಸಂಬಂಧಿಕರೆಲ್ಲರೂ ಅಲ್ಲಿಸಾಬನಿಗೆ ಬುದ್ಧಿವಾದ ಹೇಳಿರುತ್ತೇವೆ.

3. ಸುಮಾರು 2 ವರ್ಷಗಳ ಹಿಂದೆ ರಾತ್ರಿ ಸುಮಾರು 8-30 ಗಂಟೆಗೆ ನಮ್ಮ ಮನೆಗೆ ಅಲ್ಲಿಸಾಬ ಬಂದಿದ್ದನು. ನಾವು ಊಟದ ಸಮಯ ಆಗಿದ್ದರಿಂದ ಅಲ್ಲಿಸಾಬನಿಗೆ ಊಟ ಮಾಡಲು ಹೇಳಿದೆವು, ಆಗ ಅಲ್ಲಿಸಾಬನಿಗೆ ಫೋನಕರೆ ಬಂದು ಆತನು ಮಾತನಾಡುತ್ತಾ ಮನೆಯಿಂದ ಹೊರಗೆ ಹೋದನು. ನಂತರ ನಾವೆಲ್ಲರೂ ಊಟ ಮಾಡಿ ಮನೆಯಲ್ಲಿ ಮಲಗಿಕೊಂಡೆವು. ನಂತರ ರಾತ್ರಿ ಸುಮಾರು 10-30 ಗಂಟೆಗೆ ನನ್ನ ನಾದಿನಿಯ ಮಕ್ಕಳಾದ ಚಾಸಾ-14 ಮತ್ತು 15 ರವರು ನಮ್ಮ ಮನೆಗೆ ಬಂದು ಅಲ್ಲಿಸಾಬನನ್ನು 1 ನೇ ಆರೋಪಿ ಗ್ಯಾನಪ್ಪ ರವರ ಮನೆಯಲ್ಲಿ ಹಾಕಿಕೊಂಡು ಹೊಡಿಯುತ್ತಿದ್ದಾರೆ ಎಂದು ತಿಳಿಸಿದರು. ನಂತರ ವಿಚಾರ ತಿಳಿದು ನಾನು, ನನ್ನ ಅತ್ತೆ-ಮಾವ, ಭಾವ, ಮೈದುನರು 1 ನೇ ಆರೋಪಿ ಮನೆಗೆ ಹೋಗಿರುತ್ತೇವೆ. ಆಗ ಮನೆಯ ಬಾಗಿಲು ಒಳಗಿನಿಂದ ಹಾಕಲಾಗಿತ್ತು, ನಾವು ಬಾಗಿಲನ್ನು ಹೊರಗಿನಿಂದ ಬಡಿದಿರುತ್ತೇವೆ. ಆದರೆ ಆರೋಪಿತರು ಒಳಗಿನಿಂದ ಬಾಗಿಲನ್ನು ತೆಗೆಯಲಿಲ್ಲ. ನಂತರ ನಾವು ಮನೆಯ ಕಿಟಕಿಯಿಂದ ಒಳಗೆ ನೋಡಿ ಆರೋಪಿತರಿಗೆ ಅಲ್ಲಿಸಾಬನಿಗೆ ಬುದ್ಧಿ ಹೇಳುತ್ತೇವೆ ಹೊಡೆಯಬೇಡಿ ಎಂದು ಕೇಳಿಕೊಂಡಿರುತ್ತೇವೆ. ಆಗ ಆರೋಪಿತರೆಲ್ಲರೂ ನಿಮ್ಮ ಮನೆಯ ಹೆಣ್ಣು ಮಕ್ಕಳನ್ನು ಮುಟ್ಟಿದರೆ ನೀವು ಸುಮ್ಮನೆ ಬಿಡುತ್ತೀರಾ ಬೋಸಡಿ ಮಕ್ಕಳಾ ಎಂದು ಅವಾಚ್ಯವಾಗಿ ನಮ್ಮನ್ನು ಬೈದಿರುತ್ತಾರೆ. ಆಗ ಮನೆಯ ಒಳಗೆ 1 ನೇ ಆರೋಪಿ/ಗ್ಯಾನಪ್ಪ, 2 ನೇ ಆರೋಪಿ/ಚಂದ್ರಪ್ಪ, ಯಲ್ಲವ್ವ, 3 ನೇ ಆರೋಪಿ/ಹನಮಪ್ಪ, ಬಾಲಪ್ಪ, 4 ನೇ ಆರೋಪಿ/ದ್ಯಾವಪ್ಪ, ಕರಿಯಪ್ಪ, ಮತ್ತೊಬ್ಬ ಹನಮಪ್ಪ ಇದ್ದರು. 2 ನೇ ಆರೋಪಿ ಮತ್ತು 3 ನೇ ಆರೋಪಿ ಅಲ್ಲಿಸಾಬನಿಗೆ ಕಟ್ಟಿಗೆಗಳಿಂದ ಹೊಡೆದಿರುತ್ತಾರೆ. ಆಗ ಅಲ್ಲಿಸಾಬ ಬಿದ್ದ ಏಟುಗಳಿಂದ ದನದ ಕೊಟ್ಟಿಗೆಯಲ್ಲಿ ಬಿದ್ದಿರುತ್ತಾರೆ. ಅದೇ ಸಮಯಕ್ಕೆ 1 ನೇ ಆರೋಪಿ/ಗ್ಯಾನಪ್ಪ ಕಬ್ಬಿಣದ ಸಲಾಕೆಯ ಕಾವಿನಿಂದ ಅಲ್ಲಿಸಾಬನ ತಲೆಯ ಮೇಲೆ ಮತ್ತು ಮುಖದ ಮೇಲೆ ಹಲ್ಲೆ ಮಾಡಿರುತ್ತಾನೆ. ಅಲ್ಲಿಯೆ ಪಕ್ಕದಲ್ಲಿ ನಿಂತಿದ್ದ ಚಾಸಾ-6/ರೇಣುಕಾ ರವರಿಗೆ 1 ನೇ ಆರೋಪಿ ಕಾಲಿನಿಂದ ಒದ್ದಾಗ ಆಕೆಯ ತಲೆ ಗೋಡೆಗೆ ಬಡಿದು ಬಿದ್ದಿರುತ್ತಾಳೆ. ನಂತರ ಆಕೆಯ ಅತ್ತೆ/ಯಲ್ಲವ್ವ ಮತ್ತು

ಮಾವ/ಚಂದ್ರಪ್ಪ ಕೈಗಳಿಂದ ಆಕೆಗೆ ಹೊಡೆದಿರುತ್ತಾರೆ. ಮನೆಯಲ್ಲಿದ್ದ ಉಳಿದವರು ಸಹ ಆಕೆಗೆ ಕೈಗಳಿಂದ ಹೊಡೆದು ಮತ್ತು ಕಾಲಿನಿಂದ ಒದ್ದಿರುತ್ತಾರೆ.

4. ಸ್ವಲ್ಪ ಸಮಯದ ನಂತರ ಪೊಲೀಸ ವ್ಯಾನ್ ಆರೋಪಿತರ ಮನೆ ಹತ್ತಿರ ಬಂದಾಗ ಅದರ ಸೈರನ್ ಶಬ್ಧ ಕೇಳಿ ಆರೋಪಿತರೆಲ್ಲರೂ "ಸತ್ತಲೆ ಇವ ಸೂಳಿಮಗಾ'' ಎಂದು ಹೇಳಿ ಮನೆಯಿಂದ ಎಲ್ಲರೂ ಓಡಿ ಹೋಗಿರುತ್ತಾರೆ. ನಂತರ ನಾವು ಮನೆಯ ಒಳಗೆ ಹೋಗಿ ನೋಡಲಾಗಿ ನನ್ನ ಮೈದುನ ಅಲಿಸಾಬ ಮನೆಯ ದನದ ಕೊಟ್ಟಿಗೆಯಲ್ಲಿ ಸತ್ತುಬಿದ್ದಿದ್ದನು. ನಂತರ ನನ್ನ ಅತ್ತೆ-ಮಾವ ರವರ ಜೊತೆ ವಿಚಾರ ಮಾಡಿ ನನ್ನ ಭಾವ/ಚಾಸಾ-1 ರವರು ಮರುದಿನ ಇಲಕಲ್ಲ ಗ್ರಾಮೀಣ ಪೊಲೀಸ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ನನ್ನ ಮೈದುನ ಅಲಿಸಾಬನಿಗೆ ಹೊಡೆದ 1, 2, 3 ಮತ್ತು 6 ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ಉಳಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲುಃ**

**(ಆರೋಪಿತರ ಪರ ವಕೀಲರು ಅರ್ಜಿ ಸಲ್ಲಿಸಿ ಸಾಕ್ಷಿಯನ್ನು ಚಾಸಾ-6 ರಿಂದ 16 ರವರ ಮುಖ್ಯ ವಿಚಾರಣೆ ಆದ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿ** ಈಗಾಗಲೇ **ಅರ್ಜಿ ಸಲ್ಲಿಸಿದ್ದು, ಅದನ್ನು ಪುರಸ್ಕರಿಸಿ, ಪಾಟೀ ಸವಾಲನ್ನು ಮುಂದೂಡಲಾಯಿತು)**..

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 33/2022

| | | | |
|---|---|---|---|
| ಹೆಸರು | : | ರೇಣುಕಾ ಪೂಜಾರಿ | ಫ್ರಾ.ಸಾ-4 |
| ಗಂಡನ ಹೆಸರು | : | ಗ್ಯಾನಪ್ಪ | ಚಾಸಾ-6 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಚಟ್ನಿಹಾಳ | |

ದಿಃ 15.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1 ನೇ ಆರೋಪಿ/ಗ್ಯಾನಪ್ಪ ನನ್ನ ಗಂಡ. 2 ನೇ ಆರೋಪಿ/ಚಂದ್ರಪ್ಪ ನನ್ನ ಮಾವ. 3 ನೇ ಆರೋಪಿ/ಹನಮಪ್ಪ ನನ್ನ ಮೈದುನ. 4 ನೇ ಆರೋಪಿ/ದ್ಯಾವಪ್ಪ ನನ್ನ ಮಾವ. ಮೃತ ಅಲ್ಲಾಸಾಬ ನನಗೆ ಗೊತ್ತು, ಅವರು ನಮ್ಮ ಗ್ರಾಮದ ವಾಸಿ ಆಗಿದ್ದರು. ನನ್ನ ಬಳಿ ಯಾವುದೇ ಮೊಬೈಲ ಫೋನ ಇರುವುದಿಲ್ಲ. ಮೃತ ಅಲ್ಲಾಸಾಬ ಮತ್ತು ನನ್ನ ಮಧ್ಯ ಯಾವುದೇ ಸಂಬಂಧ ಇರಲಿಲ್ಲ ಮತ್ತು ಊರಿನಲ್ಲಿ ಯಾವುದೇ ವಿಚಾರ ಸುದ್ದಿಯಾಗಿರಲಿಲ್ಲ. ಮೃತ ಅಲ್ಲಾಸಾಬ ನನಗೆ ಯಾವುದೇ ಕರೆ ಮಾಡುತ್ತಿರಲಿಲ್ಲ. ಮೃತ ಅಲ್ಲಾಸಾಬ ವಿಚಾರವಾಗಿ ನನ್ನ ಮತ್ತು ನನ್ನ ಗಂಡನ ಮಧ್ಯ ಯಾವುದೇ ಭಿನ್ನಾಬಿಪ್ರಾಯ ಮತ್ತು ಜಗಳ ಇರಲಿಲ್ಲ. ಸದರಿ ವಿಚಾರವಾಗಿ ನಮ್ಮ ಹಿರಿಯರು ಮತ್ತು ಊರಿನವರು ಯಾವುದೇ ಬುದ್ಧಿವಾದ ಹೇಳಿರುವುದಿಲ್ಲ.

2. ಸುಮಾರು 2 ವರ್ಷಗಳ ಹಿಂದೆ ಅಲ್ಲಾಸಾಬ ಮೃತಪಟ್ಟಿರುತ್ತಾರೆ. ಸುಮಾರು 2 ವರ್ಷಗಳ ಹಿಂದೆ ನಾನು ಮತ್ತು ನನ್ನ ಮಕ್ಕಳು ಮನೆಯಲ್ಲಿದ್ದಾಗ ರಾತ್ರಿ ಸುಮಾರು 38-30 ಗಂಟೆಗೆ ಅಲ್ಲಾಸಾಬ ನಮ್ಮ ಮನೆಯ ಮುಖ್ಯದ್ವಾರವನ್ನು ತಟ್ಟಿ ಮನೆ ಒಳಗೆ ಬಂದು ನನ್ನ ಮೇಲೆ ದಬ್ಬಾಳಿಕೆ ಮಾಡಲು ಬಂದಾಗ ನಾನು ಆತನನ್ನು ನೂಕಿದಾಗ ಸದರಿ ಅಲ್ಲಾಸಾಬ

ನನ್ನನ್ನು ಹಿಡಿದುಕೊಳ್ಳಲು ಬಂದಾಗ ತಳ್ಳಾಟದಲ್ಲಿ ನನಗೆ ಪೆಟ್ಟಾಗಿರುತ್ತದೆ ಮತ್ತು ಅಲ್ಲಾಸಾಬ ಪಡಸಾಲೆಯಿಂದ ಕೆಳಗೆ ದನದಕೊಟ್ಟಿಗೆಯಲ್ಲಿ ಬಿದ್ದಿರುತ್ತಾನೆ ಮುಂದೆ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಇದಾದ ಒಂದು ವಾರದ ನಂತರ ನನಗೆ ಇಲಕಲ್ಲನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆ. ನಂತರ ಅಲ್ಲಾಸಾಬ ಮೃತಪಟ್ಟಿರುತ್ತಾನೆ ಎಂದು ಊರಿನವರಿಂದ ತಿಳಿದು ಬಂದಿತು. ಅಲ್ಲಾಸಾಬ ಹೇಗೆ ಮೃತಪಟ್ಟಿರುತ್ತಾನೆ ಮತ್ತು ಎಲ್ಲಿ ತೀರಿಕೊಂಡ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ. .

3. ಸುಮಾರು 2 ವರ್ಷಗಳ ಹಿಂದೆ ಪೊಲೀಸರು ನನ್ನನ್ನು ಹುನಗುಂದ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಸದರಿ ಸಮಯದಲ್ಲಿ ಈಗ ನ್ಯಾಯಾಲಯದ ಮುಂದೆ ಹೇಳಿರುವ ವಿಚಾರಗಳನ್ನೆ ನ್ಯಾಯಾಧೀಶರ ಮುಂದೆ ಹೇಳಿರುತ್ತೇನೆ. ಸಾಕ್ಷಿ ಸದರಿ ಹೇಳಿಕೆಯಲ್ಲಿರವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ 164 ಸಿ ಆರ್ ಪಿ ಸಿ ಹೇಳಿಕೆಯನ್ನು ನಿಶಾನೆ ಪಿ-12 ಎಂದು, ಸಾಕ್ಷಿ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನಿಪಿ-12 ಕ್ಕೆ ಸಹಿ ಮಾಡುವ ಮುನ್ನ ಅದರಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುವುದಿಲ್ಲ.

4. ನ್ಯಾಯಾಲಯದ ಮುಂದಿರುವ ಆರೋಪಿತರ ವಿರುದ್ಧ ಏನು ಪ್ರಕರಣ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ನನ್ನ ಬಳಿ ಒಂದು ಮೊಬೈಲ ಪೋನ ಇದ್ದು ಸದರಿ ಮೊಬೈಲಗೆ 2 ನೇ ಆರೋಪಿ ನನ್ನ ಮಾವನ ಹೆಸರಿನಲ್ಲಿರುವ ಸಿಮ್ ಕಾರ್ಡ ಹಾಕಿ ಉಪಯೋಗಿಸುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಮೊಬೈಲ ಸಿಮ್ ಸಂಖ್ಯೆ 8861854924 ಆಗಿತ್ತು ಎಂದರೆ ಸರಿಯಲ್ಲ. ಅಲ್ಲಿಸಾಬ ಮೃತಪಡುವ 4-5 ತಿಂಗಳ ಹಿಂದೆ ಆತನಿಗೆ ನನ್ನ ಮೊಬೈಲ ಸಂಖ್ಯೆ ತಿಳಿದು ನನಗೆ ಆಗಾಗ ಕರೆ ಮಾಡುತ್ತಿದ್ದನು ಎಂದರೆ ಸರಿಯಲ್ಲ. ನಾನು ಮತ್ತು ಅಲ್ಲಿಸಾಬ ಆಗಾಗ ಮೊಬೈಲನಲ್ಲಿ ಮಾತನಾಡುತ್ತಿದ್ದು ನಮ್ಮಿಬ್ಬರ ಮಧ್ಯ ಅನೈತಿಕ ಸಂಬಂಧ ಇತ್ತು ಎಂದರೆ ಸರಿಯಲ್ಲ. ನನ್ನ ಮತ್ತು ಅಲ್ಲಾಸಾಬ ರವರ ಮಧ್ಯ ಇರುವ ಅನೈತಿಕ ಸಂಬಂಧದ ವಿಚಾರ ನನ್ನ ಗಂಡ ಹಾಗೂ ನಮ್ಮ ಮನೆಯ ಜನರು ನನಗೆ ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ.

2. ದಿಃ 10.01.2022 ರಂದು ಅಲ್ಲಿಸಾಬ ನನಗೆ ಪದೇ ಪದೇ ಪೋನ ಮಾಡಿ ನನ್ನೊಂದಿಗೆ ಮಾತನಾಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ಅದೇ ದಿನ ರಾತ್ರಿ ಅಲ್ಲಿಸಾಬ ನನಗೆ ಕರೆ ಮಾಡಿ ನನ್ನ ಗಂಡ ಶಾಲೆ ಕಡೆಗೆ ಬರುತ್ತಿದ್ದಾನೆ ಎಂದು ಹೇಳಿದಾಗ, ನಾನು ಮನೆಯಲ್ಲಿ ಮಲಗಿಕೊಂಡೆ ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ನಮ್ಮ ಮನೆಯ ಬಾಗಿಲು ಸಪ್ಪಳಾದಾಗ ನಾನು ಬಾಗಿಲು ತೆಗೆದು ನೋಡಿದಾಗ ಅಲ್ಲಿಸಾಬ ಬಾಗಿಲ ಬಳಿ ನಿಂತಿದ್ದನು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಅಲ್ಲಿಸಾಬ ಮನೆ ಬಾಗಿಲನ್ನು ಒಳಗಡೆಯಿಂದ ಹಾಕಿ ಮನೆಯಲ್ಲಿ ಮಾತನಾಡುತ್ತಾ ಕುಳಿತುಕೊಂಡಿದ್ದೆವು ಎಂದರೆ ಸರಿಯಲ್ಲ. ಅಷ್ಟರಲ್ಲಿ ನನ್ನ ಗಂಡ ಮನೆಗೆ ಬಂದಾಗ ನಾನು ಮನೆಯ ಲೈಟ್ ಆರಿಸಿ ಬಾಗಿಲು ತೆಗೆದಿರುತ್ತೇನೆ ಎಂದರೆ ಸರಿಯಲ್ಲ. ನಂತರ ಅಲ್ಲಿಸಾಬ ನಮ್ಮ ಮನೆಯ ದನದ ಕೊಟ್ಟಿಗೆಯ ಬಳಿ ಇರುವ ಕಾಟ್ ಕೆಳಗೆ ಅವಿತುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡ ಅಲ್ಲಿಸಾಬ ಕಾಟ್ ಕೆಳಗೆ ಅವಿತುಕೊಂಡಿರುವುದನ್ನು ನೋಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ನನ್ನ ಗಂಡ ಹೊರಗಿನಿಂದ ಮನೆ ಚಿಲಕವನ್ನು

ಹಾಕಿ ಮನೆಯಿಂದ ಹೊರಗೆ ಹೋಗಿರುತ್ತಾನೆ ಎಂದರೆ ಸರಿಯಲ್ಲ, ನಂತರ ಸ್ವಲ್ಪ ಸಮಯದಲ್ಲಿ ನನ್ನ ಗಂಡ ಗ್ಯಾನಪ್ಪ, ನನ್ನ ಮಾವ ಚಂದ್ರಪ್ಪ, ಅತ್ತೆ ಯಲ್ಲವ್ವ, ಮೈದುನರಾದ ಹನಮಪ್ಪ, ಬಾಲಪ್ಪ ಮತ್ತು ನಮ್ಮ ನೆರೆಯ ಮನೆಯವರಾದ ದ್ಯಾವಪ್ಪ ಕಾಟಿ ಹಾಗೂ ಎದುರುಮನೆಯವರಾದ ಕರಿಯಪ್ಪ ಪೂಜಾರಿ ಹಾಗೂ ಹನಮಪ್ಪ ಪೂಜಾರಿ ಎಲ್ಲರೂ ಸೇರಿ ನಮ್ಮ ಮನೆ ಒಳಗೆ ಬಂದು ಮನೆಯ ಬಾಗಿಲು ಒಳಗಿನಿಂದ ಹಾಕಿ ಎಲ್ಲರೂ ಸೇರಿ ಅಲ್ಲಿಸಾಬನಿಗೆ ಅವಾಚ್ಯವಾಗಿ ಬೈದು, ಹೊಡೆಯಹತ್ತಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಮಾವ ಚಂದ್ರಪ್ಪ ಹಾಗೂ ನನ್ನ ಮೈದುನ ಹನಮಂತ ಅಡುಗೆ ಮನೆಯಲ್ಲಿದ್ದ ಕಟ್ಟಿಗೆಳನ್ನು ತೆಗೆದುಕೊಂಡು ಅಲ್ಲಿಸಾಬನಿಗೆ ಹೊಡೆದರು ಎಂದರೆ ಸರಿಯಲ್ಲ. ನಂತರ ನನ್ನ ಗಂಡ ತನ್ನ ಕೈಯಲ್ಲಿದ್ದ ಸಲಿಕೆಯ ಕಾವಿನಿಂದ ಅಲ್ಲಿಸಾಬನ ಮುಖಕ್ಕೆ ಜೋರಾಗಿ ಹೊಡೆದು, ಎಲ್ಲರೂ ಸೇರಿ ಕಾಲಿನಿಂದ ಒದ್ದು, ಕೈಯಿಂದ ಹೊಡೆಯುತ್ತಿದ್ದಾಗ ನನ್ನ ಗಂಡ ನನಗೆ ಒದ್ದಾಗ ನನ್ನ ತಲೆ ಗೋಡೆಗೆ ಬಡಿದು ಗಾಯವಾದಾಗ ನನ್ನ ಮಾವ ಚಂದ್ರಪ್ಪ ಮತ್ತು ನನ್ನ ಅತ್ತೆ ಯಲ್ಲವ್ವ ನನಗೆ ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿಸಾಬನಿಗೆ ಮುಖಕ್ಕೆ ರಕ್ತ ಗಾಯವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ, ಈ ಘಟನೆ ನಡೆದಾಗ ಸಮಯ ರಾತ್ರಿ ಸುಮಾರು 10-30 ಗಂಟೆಯಾಗಿತ್ತು ಎಂದರೆ ಸರಿಯಲ್ಲ. ನನ್ನ ಗಂಡ, ನನ್ನ ಅತ್ತೆ ಮಾವ ರವರು ನನಗೆ ಹಲ್ಲೆ ಮಾಡಿದ್ದರಿಂದ ನನಗೆ ಗಾಯಗಳಾಗಿ ನಾನು ಇಲಕಲ್ಲನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

3. ದಿಃ 11.01.2022 ರಂದು ನಾನು ಇಲಕಲ್ಲನ ಆಸ್ಪತ್ರೆಯಲ್ಲಿ ಈ ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯ ವೇಳೆಯಲ್ಲಿ ಪೊಲೀಸರು ಚಿತ್ರೀಕರಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನಗೆ ನನ್ನ ಗಂಡನ ಒಂದು ಪೋನ ಕೊಟ್ಟಿದ್ದು............. ಈ ಘಟನೆ ರಾತ್ರಿ 10-30 ರಿಂದ 11 ಗಂಟೆಗೆ ಆಗಿರುತ್ತದೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಶಾನೆ

ಪಿ-13 ಎಂದು ಗುರುತಿಸಲಾಯಿತು. ಸದರಿ ಚಿತ್ರೀಕರಿಸಿದ ಸಿ.ಡಿಯನ್ನು ನಿಶಾನೆ ಪಿ-14 ಎಂದು ಗುರುತಿಸಲಾಯಿತು. ಈ ಘಟನೆ ವಿಚಾರವಾಗಿ ದಿಃ 22.03.2022 ರಂದು ಹುನಗುಂದ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ನಿಪಿ-12 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಘಟನೆಯಲ್ಲಿ ಪೆಟ್ಟಾಗಿದ್ದರೂ ಮತ್ತು ಘಟನೆಯನ್ನು ಕಣ್ಣಾರೆ ನೋಡಿದ್ದರೂ ಸಹ ನನ್ನ ಅತ್ತೆ, ಮಾವ, ಮೈದುನರ ಮಾತು ಕೇಳಿ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ** ಎಸ್ ಸಿ ಹೆಚ್ **ವಕೀಲರಿಂದ ಆರೋಪಿ ಪರ**

ಹುನಗುಂದ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಪೊಲೀಸರು ಹೇಳಿ ಕೊಟ್ಟಂತೆ ನಿಪಿ-12 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.